ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 92 (92)

2) ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್
(ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 07.12.2020.

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವನ್ಯಜೀವಿಗಳ ಗಣತಿ ಕಾರ್ಯವಾಗಿದೆಯೇ: ಯಾವ ಯಾವ ವನ್ಯ ಜೀವಿಗಳು ಎಷ್ಟು ಸಂಖ್ಯೆಯಲ್ಲಿ ಯಾವ ಅರಣ್ಯ ಪ್ರದೇಶದಲ್ಲಿ ಇವೆ: ವನ್ಯಜೀವಿ ಗಣತಿ ಕಾರ್ಯ ಪ್ರಾರಂಭವಾಗದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು:	ಹೌದು. 2017–18ರ ಆನೆಗಣತಿಯಂತೆ ರಾಜ್ಯದ 33 ಅರಣ್ಯ ವಿಭಾಗಗಳಲ್ಲಿ ಒಟ್ಟು 6049 ಆನೆಗಳಿವೆ ಎಂಬುದಾಗಿ ಅಂದಾಜಿಸಲಾಗಿದೆ ಹಾಗೂ 2017–18ರ ಹುಲಿಗಣತಿಯಂತೆ ರಾಜ್ಯದಲ್ಲಿ 524 ಹುಲಿಗಳು ಇರಬಹುದು ಎಂದು ಅಂದಾಜಿಸಲಾಗಿದೆ. ಸದರಿ ವನ್ಯಪ್ರಾಣಿಗಳನ್ನು ಹೊರತುಪಡಿಸಿ ಇತರೆ ಯಾವುದೇ ವನ್ಯಪ್ರಾಣಿಗಳ ಗಣತಿ ಕಾರ್ಯವನ್ನು ಕೈಗೊಂಡಿರುವುದಿಲ್ಲ. ರಾಜ್ಯದಲ್ಲಿ ಪ್ರಮುಖವಾಗಿ ಆನೆ ಮತ್ತು ಹುಲಿಗಳ ಗಣತಿ ಕಾರ್ಯವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಕೈಗೊಳ್ಳಲಾಗುತ್ತಿದೆ. ಆನೆ ಗಣತಿಯನ್ನು 5 ವರ್ಷಕ್ಕೊಮ್ಮೆ ಹಾಗೂ ಹುಲಿ ಗಣತಿಯನ್ನು 4 ವರ್ಷಕ್ಕೊಮ್ಮೆ ಕೈಗೊಳ್ಳಲಾಗುತ್ತಿರುತ್ತದೆ.
ಆ)	ವನ್ಯಜೀವಿ ಮತ್ತು ಮಾನವರ ಸಂಘರ್ಷ ತಡೆಯಲು ಸರ್ಕಾರ ಕೈಗೊಂಡ ಕ್ರಮಗಳಾವುವು:	ವನ್ಯಜೀವಿ ಮತ್ತು ಮಾನವರ ಸಂಘರ್ಷ ತಡೆಯಲು ಇಲಾಖಾ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ರಾಜ್ಯದಲ್ಲಿರುವ ವನ್ಯಜೀವಿಗಳಿಗೆ ಸಂಪೂರ್ಣ ರಕ್ಷಣೆ ನೀಡುವ ಸಲುವಾಗಿ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಹುಲಿ ಮೀಸಲು ಅರಣ್ಯ, ಸಂರಕ್ಷಿತ ಮೀಸಲು ಅರಣ್ಯಗಳನ್ನು ಘೋಷಿಸಲಾಗಿರುತ್ತದೆ. 2. ಅರಣ್ಯ ಪ್ರದೇಶದಲ್ಲಿ ಹುಲ್ಲುಗಾವಲು ಸಂರಕ್ಷಣೆ ಹಾಗೂ ಅಭಿವೃದ್ಧಿಗೊಳಿಸಲು 2019–20ನೇ ಸಾಲಿನಿಂದ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಅರಣ್ಯ ಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದ ಲಂಟಾನ ಮತ್ತು ಯುಪಟೋರಿಯಂ ಕಳೆಗಳನ್ನು ಹಂತ ಹಂತವಾಗಿ ಕಿತ್ತು ಸ್ವಚ್ಛಗೊಳಿಸಿ ಅರಣ್ಯಕ್ಕೆ ಪೂರಕವಾದ ಹುಲ್ಲು ಬೆಳೆಯಲು ಅವಕಾಶ ಮಾಡಲಾಗಿದೆ. 3. ವನ್ಯ ಪ್ರಾಣಿಗಳಿಗಾಗಿ ಅರಣ್ಯ ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತಾರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಪುನಶ್ಚೇತನಗೊಳಿಸಿ ವನ್ಯಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಇದರಿಂದ ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬಾರದಂತೆ ತಡೆಯಲಾಗುತ್ತಿದೆ. 4. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ತಡೆಗಟ್ಟಲು ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ/ನಿರ್ವಹಣೆ, ಆನೆ ತಡೆ ಕಂದಕ ನಿರ್ಮಾಣ/ನಿರ್ವಹಣೆ ಮಾಡಲಾಗಿದ್ದು ಮತ್ತು ಉಪಯೋಗಿತ ರೈಲ್ವೆ ಹಳಿಗಳನ್ನು ಬಳಸಿಕೊಂಡು ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>5. ಕಳ್ಳಬೇಟೆ ತಡೆ ಶಿಬಿರಗಳಿಗೆ ಹಾಗೂ Rapid Response Teams (RRT) ಗಳನ್ನು ಅಂದರೆ ಕಾಡಾನೆ ಹಿಮ್ಮೆಟ್ಟಿಸುವ ತಂಡಗಳನ್ನು ರಚಿಸಿ ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ Wireless Networking ಮೂಲಕ ಮಾಹಿತಿ ಸಂವಹನ ಮಾಡಲಾಗುತ್ತಿದೆ.
6. ಕಾಡಾನೆಗಳ ಮಾಹಿತಿಯನ್ನು ಸಂಗ್ರಹಿಸಲು 24 ಗಂಟೆ ಕಾರ್ಯನಿರ್ವಹಿಸುವ ಮಾಹಿತಿ ಕೇಂದ್ರ ಸ್ಥಾಪಿಸಲಾಗಿದೆ.
7. ಕಾಡಾನೆ ಗುಂಪಿನಲ್ಲಿದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಆನೆಗಳ ಚಲನವಲನಗಳ ಬಗ್ಗೆ ಎಸ್.ಎಂ.ಎಸ್. ಹಾಗೂ ವಾಟ್ಸಾಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.
8. ಸಾರ್ವಜನಿಕರಿಗೆ ಉಪಟಳ ನೀಡುತ್ತಿರುವ ಪುಂಡಾನೆಗಳನ್ನು ಗುರುತಿಸಿ, ಸೆರೆ ಹಿಡಿದು ಆಗ್ಗಿಂದಾಗ್ಗೆ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ.
9. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ–ತಂತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ನಿಯಮಾನುಸಾರ ಪರಿಶೀಲಿಸಿ ಆದ್ಯತೆಯ ಮೇರೆಗೆ ನೇರವಾಗಿ ಸಂತ್ರಸ್ಥರ ಖಾತೆಗೆ ದಯಾತ್ಮಕ ಧನವನ್ನು ಪಾವತಿಸುವ ಪ್ರಕ್ರಿಯೆಯನ್ನು ಇ–ಪರಿಹಾರ ತಂತ್ರಾಶದ ಮೂಲಕ ನಿರ್ವಹಿಸಲಾಗುತ್ತಿದೆ.</td></tr>
<tr><td>ಇ)</td><td>ಕಳೆದ ಒಂದು ವರ್ಷದಲ್ಲಿ ಕಾಡು ಪ್ರಾಣಿಗಳ ದಾಳಿಯಿಂದ ಮೃತರಾದವರ ಸಂಖ್ಯೆ ಎಷ್ಟು;</td><td>ಕಳೆದ ಒಂದು ವರ್ಷದಲ್ಲಿ ಅಂದರೆ, 2019–20ನೇ ಸಾಲಿನಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಒಟ್ಟು 50 ಜನರು ಮೃತಪಟ್ಟಿರುತ್ತಾರೆ.</td></tr>
<tr><td>ಈ)</td><td>ಕಳೆದ ಒಂದು ವರ್ಷದಲ್ಲಿ ನಾಡಿಗೆ ಬಂದ ಎಷ್ಟು ಕಾಡು ಪ್ರಾಣಿಗಳನ್ನು ರಕ್ಷಿಸಲಾಗಿದೆ: ಯಾವ ಯಾವ ಕಾಡು ಪ್ರಾಣಿಗಳನ್ನು ರಕ್ಷಿಸಿ ಪುರ್ನವಸತಿ ಕಲ್ಪಿಸಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)</td><td>ಕಳೆದ ಒಂದು ವರ್ಷದಲ್ಲಿ ಕಾಡಿನಿಂದ ಹೊರಬಂದ ವನ್ಯಪ್ರಾಣಿಗಳನ್ನು ಸೆರೆ ಹಿಡಿದು ರಕ್ಷಿಸಿ ಪುನರ್ವಸತಿ ಕಲ್ಪಿಸಲಾದ ಜಿಲ್ಲಾವಾರು ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ.ಸ.</th><th>ದಿನಾಂಕ</th><th>ರಕ್ಷಿಸಲಾದ ವನ್ಯಪ್ರಾಣಿ</th><th>ಜಿಲ್ಲೆ</th></tr>
<tr><td colspan="4">ಚಾಮುಂಡಿ ಪುನರ್ವಸತಿ ಕೇಂದ್ರ, ಕೂರ್ಗಳ್ಳಿ, ಮೈಸೂರು</td></tr>
<tr><td>1</td><td>21.01.2020</td><td>ಕಾಡುಪಾಪ (2)</td><td>ಮೈಸೂರು</td></tr>
<tr><td>2</td><td>03.05.2020</td><td>ಆನೆ ಮರಿ</td><td>ಚಾಮರಾಜನಗರ</td></tr>
<tr><td>3</td><td>19.05.2020</td><td>ಹುಲಿ</td><td>ಕೊಡಗು</td></tr>
<tr><td>4</td><td>20.05.2020</td><td>ಹುಲಿ</td><td>ಚಾಮರಾಜನಗರ</td></tr>
<tr><td>5</td><td>29.09.2020</td><td>ಆನೆ ಮರಿ</td><td>ಕೊಡಗು</td></tr>
</table></td></tr>
</table>

ಕ್ರ.ಸಂ	ಪ್ರಶ್ನೆ	ಉತ್ತರ

ಬನ್ನೇರುಘಟ್ಟ ಜೈವಿಕ ಉದ್ಯಾನವನ ಪುನರ್ವಸತಿ ಕೇಂದ್ರ

1	28.05.2019	ಚಿರತೆ	ಹುಲಿಯೂರುದುರ್ಗ, ತುಮಕೂರು
2	05.09.2019	ಚಿರತೆ ಮರಿಗಳು(2)	ಹಾಸನ
3	07.09.2019	ಕರಡಿ	ಬಳ್ಳಾರಿ
4	21.09.2019	ಕರಡಿ ಮರಿ	ರಾಮನಗರ
5	01.10.2019	ಚಿರತೆ	ತುಮಕೂರು
6	16.10.2019	ಚಿರತೆ ಮರಿ	ನಂಜನಗೂಡು, ಮೈಸೂರು
7	02.11.2019	ಕರಡಿ	ಹಾರೋಹಳ್ಳಿ, ರಾಮನಗರ
8	22.12.2019	ಕರಡಿ	ಬಿಳಿಗಿರಿ ರಂಗನಾಥ ಬೆಟ್ಟ, ಚಾಮರಾಜನಗರ
9	25.12.2019	ಚಿರತೆ	ಕುಣಿಗಲ್, ತುಮಕೂರು
10	28.01.2020	ಕರಡಿ	ಚಿತ್ರದುರ್ಗ
11	12.02.2020	ಕರಡಿ	ಪಾವಗಡ, ತುಮಕೂರು
12	01.03.2020	ಚಿರತೆ	ತಾವರೆಕೆರೆ, ತುಮಕೂರು
13	13.04.2020	ಚಿರತೆ	ತುಮಕೂರು
14	16.04.2020	ಚಿರತೆ	ತುಮಕೂರು
15	27.05.2020	ರಾಯಲ್ ಬೆಂಗಾಲ್ ಹುಲಿ	ನಾಗರಹೊಳೆ, ಹುಣಸೂರು
16	27.05.2020	ಚಿರತೆ	ಬೆಂಗಳೂರು ಗ್ರಾಮಾಂತರ
17	12.06.2020	ಚಿರತೆ	ಬೆಂಗಳೂರು ಗ್ರಾಮಾಂತರ
18	08.09.2020	ರಾಯಲ್ ಬೆಂಗಾಲ್ ಹುಲಿ	ಬಂಡೀಪುರ, ಮೈಸೂರು

ಶ್ರೀ ಅಟಲ್ ಬಿಹಾರಿ ವಾಜಪೇಯಿ ಮೃಗಾಲಯ, ಕಮಲಾಪುರ, ಹೊಸಪೇಟೆ

1	29-09-2020	ಕರಡಿ	ಬಳ್ಳಾರಿ

ಗದಗ ಮೃಗಾಲಯ, ಗದಗ

1	10-04-2019	ಕೃಷ್ಣಮೃಗ	ಧಾರವಾಡ (ಹುಬ್ಬಳ್ಳಿ)
2	08-05-2019	ಜಿಂಕೆ	ಧಾರವಾಡ
3	24-05-2019	ಕೃಷ್ಣಮೃಗ	ಧಾರವಾಡ (ಶಿರಹಟ್ಟಿ)
4	03-06-2019	ಕೃಷ್ಣಮೃಗ (2)	ಧಾರವಾಡ (ಹುಬ್ಬಳ್ಳಿ)
5	24-06-2019	ಕೃಷ್ಣಮೃಗ	ಧಾರವಾಡ (ಹುಬ್ಬಳ್ಳಿ)
6	29-07-2019	ಕೃಷ್ಣಮೃಗ	ಗದಗ
7	18-08-2019	ಕೃಷ್ಣಮೃಗ	ಧಾರವಾಡ (ಹುಬ್ಬಳ್ಳಿ)
8	05-09-2019	ಕೃಷ್ಣಮೃಗ	ಧಾರವಾಡ (ಶಿರಹಟ್ಟಿ)
9	08-09-2019	ಕೃಷ್ಣಮೃಗ	ತುಮಕೂರು (ಮದುಗಿರಿ)
10	11-09-2019	ಕೃಷ್ಣಮೃಗ	ತುಮಕೂರು (ಮದುಗಿರಿ)

ಸಂಖ್ಯೆ: ಅಪಜೀ 197 ಎಫ್‌ಡಬ್ಲ್ಯೂಎಲ್ 2020

(ಆನಂದ್ ಸಿಂಗ್)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಆನಂದ್ ಸಿಂಗ್
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು